ಓ. ಎಸ್. ನಂಃ 84/2021

**ಪಿ.ಡಬ್ಲ್ಯೂಃ 1**

**ದಿನಾಂಕಃ 17-07-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**

**ಪಾಟೀ ಸವಾಲುಃ 31 ನೇ ಪ್ರತಿವಾದಿ ಪರ ಶ್ರೀ ವಿ. ವಿ. ಎಂ. ವಕೀಲರಿಂದಃ**

2 ನೇ ವಾದಿ ಹಿರೇಜಂಬೂರಿನಲ್ಲಿ ವಾಸವಾಗಿರುತ್ತಾರೆ. ನನ್ನ ಅಜ್ಜ ವೀರಪ್ಪ ರವರು 2009 ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಾಯಿ, 4 ಮತ್ತು 5 ನೇ ವಾದಿಗಳ ವಿವಾಹವನ್ನು ನನ್ನ ಅಜ್ಜ ನೆರವೇರಿಸಿರುತ್ತಾರೆ. ದಾವಾ ಆಸ್ತಿಗಳಷ್ಟೇ ಅಲ್ಲದೇ ನನ್ನ ಅಜ್ಜ ವೀರಪ್ಪರವರಿಗೆ ಸಾಕಷ್ಟು ಆಸ್ತಿಗಳು ಮಾವಿನತೋವು ಗ್ರಾಮದಲ್ಲಿ ಇದ್ದವು ಎಂದರೆ ಸರಿ. ಸದರಿ ಆಸ್ತಿಗಳನ್ನು ಮನೆತನದ ಖರ್ಚಿಗೆ, ಮಕ್ಕಳ ವಿವಾಹಕ್ಕೆ ಆಗಾಗ್ಗೆ ಮಾರಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ವೀರಪ್ಪರವರ ತಂದೆಯ ಹೆಸರು ಮುರುಡೆಪ್ಪ. ಸದರಿ ಮುರುಡೆಪ್ಪರವರಿಗೆ ಮೂವರು ಮಕ್ಕಳು ಇದ್ದು, ನನ್ನ ಅಜ್ಜ, ಹನುಮಂತಪ್ಪ ಹಾಗೂ ಸಾವಕ್ಕ.

2. ದಾವಾ ಆಸ್ತಿಗಳು ನನ್ನ ಅಜ್ಜನಿಗೆ ಅವರ ತಂದೆಯಿಂದ ಬಂದಿರುತ್ತದೆ. ನನ್ನ ಅಜ್ಜ ಹಾಗೂ ಅವರ ಸಹೋದರ ಬೇರೆಯಾಗಿ ಬಹಳ ವರ್ಷವಾಗಿರುತ್ತದೆ. ನನ್ನ ಅಜ್ಜ 2007 ರಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿ. ಅವರು ಸಾಯುವ ಕಾಲಕ್ಕೆ ಸಾಕಷ್ಟು ಸಾಲ ಬಾಕಿ ಇತ್ತು ಎಂದರೆ ಸರಿಯಲ್ಲ. ಸದರಿ ಸಾಲವನ್ನು ತೀರುವಳಿಗಾಗಿ 1 ನೇ ಪ್ರತಿವಾದಿಯು ಸರ್ವೆ ನಂ. 49 ರಲ್ಲಿ ಬಹುತೇಕ ಆಸ್ತಿಯನ್ನು ಬೇರೆ ಬೇರೆಯವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ತಿಳಿದಿಲ್ಲ. ನಮ್ಮ ಮನೆ ಹಾಗೂ 1 ನೇ ಪ್ರತಿವಾದಿಯ ಮನೆ ಅಕ್ಕ ಪಕ್ಕ ಇರುತ್ತದೆ ಎಂದರೆ ಸರಿ. ಸರ್ವೆ ನಂ. 49 ರಲ್ಲಿ ಸುಮಾರು 30 ಜನಕ್ಕೆ ಆಸ್ತಿಯನ್ನು ಮಾರಾಟ ಮಾಡಿರುವ ವಿಚಾರ ನನ್ನ ತಾಯಿಗೆ, 4 ಮತ್ತು 5 ನೇ ವಾದಿಗಳಿಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ನಾನು ಬೆಂಗಳೂರಿನಲ್ಲಿದ್ದೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯವನ್ನು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು )

ಓ. ಹೆ. ಕೆ. ಸರಿ ಇದೆ ಎಂದು ಒಪ್ಪಿರುತ್ತಾರೆ.

ದಿನಾಂಕಃ 17-07-2025

Sd/-

ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್.ಸಿ,

ಹಿರೇಕೆರೂರು